
ಪದಬಂಧ



**ಎಡದಿಂದ ಬಲಕ್ಕೆ**

1. ಸಂವಿಧಾನವನ್ನು ಅನುಸರಿಸಿದ್ದಕ್ಕೇ ಇಷ್ಟೆಲ್ಲ ಅಭ್ಯುದಯ 4
3. ತುಂಬ ಅಪರೂಪ ಇಷ್ಟೊಂದು ಕೆಟ್ಟ ಸ್ವರೂಪ 3
4. ಹತ್ತಾರು ಜನ ಒಟ್ಟಾಗಿದ್ದರೂ ಸಹಕಾರ ಮಾತ್ರ ಇಲ್ಲದಂತಾಗಿದೆ 3
6. ದೈವಾನುಕೂಲ ಇಲ್ಲದಿದ್ದರಿಂದಲೇ ಈ ಕಾಡುಕಿಚ್ಚು 4
8. ಎಲ್ಲವನ್ನೂ ಮರೆತರೆ ಹೇಗೆ? ಬೇಕಾದದ್ದು, ಕೇಳಿದ್ದಕ್ಕೆ ಜವಾಬು ಅಷ್ಟೇ 4
10. ಹನ್ನೊಂದಕ್ಕೆ ಏಕಾದಶವಾದರೆ ಹದಿಮೂರಕ್ಕೆ ಹೇಗೆ? 4
12. ತಾರತಮ್ಯವನ್ನೇ ಮಾಡದ ಶ್ರೇಷ್ಠ ಮನುಷ್ಯ 4
16. ವ್ಯವಧಾನವನ್ನು ಕಿಂಚಿತ್ತೂ ಸಹಿಸದ ಈತ ನಮ್ಮ ದೇಶದವನಲ್ಲ 3
17. ಈ ಬಗೆಯ ಹಗ್ಗವನ್ನು ತಯಾರಿಸುವ ವಿಧಾನ ತುಂಬ ನಿಗೂಢ 3
18. ವಿನಯವಂತಿಕೆಯನ್ನು ಪ್ರದರ್ಶಿಸಿ ಭಾರೀ ಪ್ರಮಾಣದ ಸೋಡಿ ಪಡೆದ 4

**ಮೇಲಿನಿಂದ ಕೆಳಕ್ಕೆ**

1. ಅಪಾರ ಜ್ಞಾನವನ್ನು ಸಂಪಾದಿಸಿದವನಾಗಿದ್ದಾನೆ ಆತ 3
2. ಅರಳು, ಕೆರಳು, ಮರಳುಗಳಂತೆಯೇ ಛಾಯೆಗೆ ಹೇಗೆ? 3
3. ಪಾವನನಾಗಲೆಂದು ಆತ ತಪವನ್ನು ಕೈಗೊಂಡದ್ದು ಅದೆಂಥ ಅಡವಿ? 3
5. ಅಲ್ಲಿಗೆ ತೆರಳಲಿರುವ ಎಲ್ಲರ ಕೈಯಲ್ಲೂ ಮಾವಿನ ಚಿಗುರು 3
6. ಆಸ್ತಿಯನ್ನೆಲ್ಲ ಸುಮ್ಮನೇ ನೀಡಿದ್ದನ್ನು ಕುರಿತ ಅಧಿಕೃತ ದಾಖಲೆ 4
7. ಈ ಶಿಲಾಯುಧಗಳ ಪ್ರಾಚೀನತೆಯಲ್ಲಿ ಸಂದೇಹವೇ ಇಲ್ಲ ಕಿಂಚಿತ್ತೂ 4
8. ಶ್ರಮಿಸುತ್ತಿದ್ದವನಿಗೆ ಇಡೀ ತಿಂಗಳ ಊಟಕ್ಕೆ ಗೌರವ ಧನ 4
9. ಆರಾಮದಾಯಕವಷ್ಟೇ ಅಲ್ಲ; ತುಂಬ ಸುಂದರವೂ ಆದ ಮನೆ 4
11. ದಂಡಿನಲ್ಲೂ ಕಾರ್ಯ ನಡೆಸಿ ಬಂದಿದ್ದಾನೆ ಈ ದೈತ್ಯ 3
13. ನಂಬಿದವರೆಲ್ಲ ವಿರೋಧವನ್ನು ತೋರಿದರೆಂದು ಅಳು 3
14. ವೈಮನಸ್ಯವನ್ನು ತೊರೆಯಬೇಕೆಂದು ಬಿನ್ನಹ 3
15. ಪರಿವಾರದ ಒಟ್ಟಾರೆ ಗತಿಯಲ್ಲಿ ಭಾರೀ ಮುನ್ನಡೆ 3

---

**29—02—2024 ಉತ್ತರಗಳು**

**ಎಡದಿಂದ ಬಲಕ್ಕೆ**

1. ಅಬ್ಬರ 3. ಅಭಾವ 4. ಜಾಗ್ರತೆ 6. ಪಲಾಯನ 7. ತರದೂದು 9. ವಿಷಗಾಳಿ 11. ಪರಿಮಿತ 15. ಗಹನ 16. ಬುರುಜು 17. ಕಪಾಲ

**ಮೇಲಿನಿಂದ ಕೆಳಕ್ಕೆ**

1. ಅವನಿ 2. ರಜಾಯಿ 3. ಅನ್ಯಾಯ 5. ತೆಪರ 6. ಪಲ್ಲವಿ 8. ದುರಂತ 10. ಗಾಣಿಗ 12. ರಿವಾಜು 13. ಜನಕ 14. ತಂಬುಲ (=ತಾಂಬೂಲ)

ಪ್ರಶ್ನಾಂಕಣ

## ಸಗಣಿ ದುಂಬಿ: ಮಾರ್ಗದರ್ಶನ ಹೇಗೆ?

ಧರೆಯ ಕೀಟ ಸಾಮ್ರಾಜ್ಯದಲ್ಲಿ ದುಂಬಿಗಳದೇ ಪ್ರಧಾನ ಭಾಗ (ಚಿತ್ರ 1). ದುಂಬಿಗಳಲ್ಲಿ ಈವರೆಗೆ ಸುಮಾರು ನಾಲ್ಕು ಲಕ್ಷ ಪ್ರಭೇದಗಳನ್ನು ಗುರುತಿಸಲಾಗಿದೆ; ಹೆಸರಿಸಲಾಗಿದೆ. ಈ ಪೈಕಿ 8000 ಪ್ರಭೇದಗಳು ತಮ್ಮ ವಾಸಕ್ಕೆ, ಆಹಾರಕ್ಕೆ ಸಸ್ಯಾಹಾರಿ ಪ್ರಾಣಿಗಳ ಸಗಣಿಯನ್ನೇ ಅವಲಂಬಿಸಿವೆ; ಹಾಗಾಗಿ 'ಸಗಣಿ ದುಂಬಿ' (ಡಂಗ್ ಬೀಟ್ಲ್) ಎಂಬ ಹೆಸರನ್ನೇ ಪಡೆದಿವೆ. ಸಗಣಿ ದುಂಬಿಗಳ 8000 ಪ್ರಭೇದಗಳಲ್ಲಿ 600 ಪ್ರಭೇದಗಳು ಹೊಸದಾದ ಸಗಣಿಯನ್ನು ಹುಡುಕಿ, ಸ್ವಲ್ಪ ಸಗಣಿಯನ್ನು ಗುಂಡಾಗಿ ಉಂಡೆ ಕಟ್ಟಿ, ಆ ಸಗಣಿ ಚೆಂಡನ್ನು ತಮ್ಮ ಹಿಂಗಾಲುಗಳಿಂದ ತಳ್ಳುತ್ತ, ಉರುಳಿಸುತ್ತ, ಹಿಮ್ಮುಖವಾಗಿ ಚಲಿಸುತ್ತ (ಚಿತ್ರ2) ಸರಾಸರಿ ಆರು ನಿಮಿಷಗಳ ಕಾಲ ನಡೆದು, ಒಂದು ಚಿಕ್ಕ ಹಳ್ಳ ತೆಗೆದು, ಸಗಣಿ ಚೆಂಡನ್ನು ತಳ್ಳಿ ತಾನೂ ಇಳಿದು, ಆ ಸಗಣಿಯಲ್ಲೇ ಹುಗಿದುಳಿದು ಶತ್ರುಗಳಿಂದ ಸುರಕ್ಷಿತವಾಗುತ್ತದೆ; ಅದೇ ಸಗಣಿಯನ್ನೇ ಆಹಾರವಾಗಿ ತಿಂದು ಬದುಕುತ್ತದೆ. ದಾಸ್ತಾನು ಮುಗಿದೊಡನೆ ಆ ಹಳ್ಳವನ್ನು ತೊರೆದು ಮತ್ತೊಂದು ಸಗಣಿ ರಾಶಿಯನ್ನು ಹುಡುಕುತ್ತದೆ.

ವಿಶೇಷ ಏನೆಂದರೆ, ಪ್ರತಿಸ್ಪರ್ಧಿಗಳಿಂದ ಮತ್ತು ಶತ್ರುಗಳಿಂದ ರಕ್ಷಿಸಿಕೊಳ್ಳಲು ಒಂದು ಹೊಸ ಸಗಣಿ ರಾಶಿಯಿಂದ ಒಂದಷ್ಟನ್ನು ತೆಗೆದು ಉಂಡೆ ಕಟ್ಟಿ ಉರುಳಿಸುತ್ತ ಹೋಗಿ ನೆಲದಲ್ಲಿ ಹಳ್ಳ ತೆಗೆದು ಇಳಿದು ಸಗಣಿಯಲ್ಲಿ ಹುದುಗುವ ಇಡೀ ಕಾರ್ಯಕ್ರಮ ಕನಿಷ್ಠ ಕಾಲದಲ್ಲಿ ನಡೆಯಬೇಕು; ಅಷ್ಟರಲ್ಲೇ ಸಗಣಿ ರಾಶಿಯಿಂದ ಗರಿಷ್ಠ ದೂರ ಸಾಗಿರಬೇಕು ಕೂಡ. ಹಾಗಾಗಲು ಸಗಣಿ ದುಂಬಿಯ ಪಯಣ ಕಿಂಚಿತ್ತೂ ಅಂಕುಡೊಂಕುಗಳಿಲ್ಲದ ನೇರ ದಾರಿಯಲ್ಲೇ ನಡೆಯಬೇಕು. ಅದು ಸಾಧ್ಯವಾಗಲು ಒಂದು ನಂಬಲರ್ಹ ಮಾರ್ಗದರ್ಶಿ ಬೇಕೇ ಬೇಕು. ಇಲ್ಲವಾದರೆ ಮನುಷ್ಯರೂ ಸೇರಿದಂತೆ ಎಲ್ಲ ಪ್ರಾಣಿಗಳ ನಡಿಗೆಯೂ ವಕ್ರರೇಖೆಗಳನ್ನೇ ಅನುಸರಿಸುತ್ತದೆ.




ಅದಕ್ಕಾಗಿ ಸಗಣಿ ದುಂಬಿಗೆ ಮೈಗೂಡಿರುವ ತಂತ್ರ ಅದೊಂದು ಮಹಾನ್ ವಿಸ್ಮಯ. ಅದೇನೆಂದು ನೀವೇ ಗಮನಿಸಿ: ಸಗಣಿ ದುಂಬಿಗಳು ಯಾವಾಗಲೂ ಪೂರ್ವ ದಿಕ್ಕಿನಿಂದ ಪಶ್ಚಿಮದ ಕಡೆಗೇ ಸಾಗುತ್ತವೆ. ಮೊದಲಿಗೆ ಹಸಿ ಸಗಣಿಯನ್ನು ಉಂಡೆ ಕಟ್ಟಿದ ಕೂಡಲೇ ಆ ಉಂಡೆಯ ಮೇಲೇರಿ ಆಕಾಶದಲ್ಲಿ ಸೂರ್ಯ ಇರುವ ಸ್ಥಳವನ್ನು ಗುರುತಿಸಿಕೊಳ್ಳುತ್ತವೆ. ನಂತರ ಕೆಳಕ್ಕಿಳಿದು ಸೂರ್ಯನ ಕಡೆಗೆ ತಲೆಮಾಡಿ ಹಿಂಗಾಲುಗಳಿಂದ ಸಗಣಿ ಉಂಡೆಯನ್ನು ಉರುಳಿಸುತ್ತ, ಸೂರ್ಯನನ್ನು ಗಮನಿಸುತ್ತ ಹಿಮ್ಮುಖವಾಗಿ, ಎಂದರೆ ಪಶ್ಚಿಮದತ್ತ ಸಾಗುತ್ತವೆ. ಹಾಗಾದರೆ ಅವುಗಳ ಚಲನಾ ಮಾರ್ಗ ಸರಳ ರೇಖಾನುಗತ ಆಗಿಯೇ ಇರುತ್ತದೆ ತಾನೇ? ರಾತ್ರಿಯ ವೇಳೆಗಳಲ್ಲಿ ಸಗಣಿ ದುಂಬಿಗಳು ಚಂದ್ರನಿಂದ ಮಾರ್ಗದರ್ಶನವನ್ನು ಪಡೆಯುತ್ತವೆ. ಚಂದ್ರನಿಲ್ಲದ ರಾತ್ರಿಗಳಲ್ಲಿ ಆಗಸದಲ್ಲಿ ಪೂರ್ವ ಪಶ್ಚಿಮವಾದ ಪಟ್ಟೆಯಂತೆ ಗೋಚರಿಸುವ ನಮ್ಮ ಗ್ಯಾಲಕ್ಸಿಯಾದ ಕ್ಷೀರಪಥವನ್ನೇ (ಚಿತ್ರ 3) ಅನುಸರಿಸಿ ನೇರ ದಾರಿ ಹಿಡಿಯುತ್ತವೆ! ಇವನ್ನೆಲ್ಲ ಈ ಕ್ಷುಲ್ಲಕ ಕೀಟಗಳು ಕಲಿಯುವುದು, ತಿಳಿಯುವುದು ಹೇಗೆ? ಎಂಥ ವಿಸ್ಮಯ!

■ ಎನ್. ವಾಸುದೇವ್